# ಸಾರ್ಕೊ ಪಾಡ್

## ನೋವಿಲ್ಲದೆ ಸಾವಿನೆಡೆಗೆ ಪಯಣ

**ದಯಾಮರಣ ಬಯಸುವವರನ್ನು ನೋವಿಲ್ಲದೆ ಸಾವಿನೆಡೆಗೆ ಸಾಗಿಸುವ ಯಂತ್ರವೊಂದನ್ನು ಸ್ವಿಟ್ಜರ್‌ಲೆಂಡ್‌ನಲ್ಲಿ ಅಭಿವೃದ್ಧಿಪಡಿಸಲಾಗಿದೆ.**

■ **ಶಶಿಕುಮಾರ್ ಸಿ.**

ಎಲ್ಲ ತಂತ್ರಜ್ಞಾನ, ಸಂಶೋಧನೆಗಳ ಆವಿಷ್ಕಾರಗಳು ಸಾಮಾನ್ಯವಾಗಿ ಮನುಷ್ಯನ ಉನ್ನತಿಯನ್ನು ಗುರಿಯಾಗಿರಿಸಿಕೊಂಡಿರುತ್ತವೆ. ಆದರೆ ಇಲ್ಲೊಂದು ಅತ್ಯಾಧುನಿಕ ತಂತ್ರಜ್ಞಾನ ಆಧಾರಿತ ಯಂತ್ರ, ಸಾಯಲಿಚ್ಛಿಸುವ ಮನುಷ್ಯನ ಸಹಾಯಕ್ಕೆ ಧಾವಿಸಿದೆ. ನೋವಿಲ್ಲದೆ ಸಾವಿನೆಡೆಗೆ ಮನುಷ್ಯನನ್ನು ಸಾಗಿಸುವ ನಿಟ್ಟಿನಲ್ಲಿ ಕೆಲಸ ಮಾಡುವ ಈ ಯಂತ್ರ ಸುದ್ದಿಯಲ್ಲಿದೆ.

ದಯಾಮರಣಕ್ಕೆ ಜಗತ್ತಿನ ಕೆಲವು ದೇಶಗಳಲ್ಲಷ್ಟೇ ಅವಕಾಶವಿದೆ. ಅಂಥ ದೇಶಗಳಲ್ಲಿ ಸ್ವಿಟ್ಜರ್‌ಲೆಂಡ್ ಒಂದು. ಆದರೆ ಕೆಲವೊಂದಿಷ್ಟು ಕಠಿಣ ಕಾನೂನು ಪ್ರಕ್ರಿಯೆಗಳನ್ನು ದಯಾಮರಣ ಕೋರುವ ವ್ಯಕ್ತಿ ಕಡ್ಡಾಯವಾಗಿ ಅನುಸರಿಸಲೇಬೇಕಿದೆ. ಇದುವರೆಗೂ ಆ ದೇಶದಲ್ಲಿ ಸಾವಿರಾರು ಮಂದಿ ದಯಾಮರಣ ಪಡೆದುಕೊಂಡಿದ್ದಾರೆ. 2020ರಲ್ಲೇ 1300 ಮಂದಿ ದಯಾಮರಣ ಪಡೆದುಕೊಂಡಿದ್ದಾರೆ.

ದಯಾಮರಣ ಪಡೆದುಕೊಳ್ಳುವ ವೇಳೆ ವ್ಯಕ್ತಿಗಳು ವಿಪರೀತ ನೋವನ್ನು ಅನುಭವಿಸುತ್ತಿದ್ದುದನ್ನು ಕಂಡ ಅಲ್ಲಿನ ತಂತ್ರಜ್ಞಾನಿ ಫಿಲಿಪ್ ನಿಟ್ಸ್‌ಚ್ಕೆ (Philip Nitschke) ಅವರನ್ನು, 'ನೋವಿಲ್ಲದೆ ಸಾವಿನೆಡೆಗೆ ಮನುಷ್ಯನನ್ನು ಕಳುಹಿಸಿಕೊಡುವುದು ಹೇಗೆ' ಎಂಬ ಪ್ರಶ್ನೆ ಕಾಡಿದೆ. ಆ ಬಗ್ಗೆ 2017ರಲ್ಲಿ ಸಂಶೋಧನೆ ಆರಂಭಿಸಿದ ಫಿಲಿಪ್ ಇದೀಗ 'ಸಾರ್ಕೊ ಪಾಡ್' (Sarco – ದಯಾಮರಣ ಯಂತ್ರ) ಅಭಿವೃದ್ಧಿಪಡಿಸಿದ್ದಾರೆ. ಇದಕ್ಕೆ 'ಡಾ. ಡೆತ್' ಅನ್ನುವ ಹೆಸರನ್ನೂ ಅವರು ಇಟ್ಟಿದ್ದಾರೆ. ಈಚೆಗಷ್ಟೇ ಅದನ್ನು ಅವರು ಹೊರಜಗತ್ತಿಗೆ ಪರಿಚಯಿಸಿದ್ದಾರೆ. ಈ ಯಂತ್ರಕ್ಕೆ ಅಲ್ಲಿನ ಸರ್ಕಾರವು ಮಾನ್ಯತೆ ನೀಡಿದ್ದು, 2022ರಲ್ಲಿ ಅದು ಬಳಕೆಗೆ ಲಭ್ಯವಾಗಲಿದೆ. ಜೀವನದಲ್ಲಿ ಜಿಗುಪ್ಸೆಗೊಂಡವರು, ವಾಸಿಯಾಗದ ಕಾಯಿಲೆಗಳಿಂದ ಬಳಲುತ್ತಿರುವವರು, ಯಾವುದೋ ಕಾರಣದಿಂದ ಹತಾಶೆಯಲ್ಲಿ ಇರುವವರು, ಸಾಯಲು ಇಚ್ಛಿಸುವವರು 'ಸಾರ್ಕೊ' ಯಂತ್ರವನ್ನು ಹತ್ತಬಹುದು.

ಸರ್ಕಾರ ಇಂತಹದ್ದೊಂದು ಯಂತ್ರಕ್ಕೆ ಅನುಮತಿ ನೀಡಿರುವುದಕ್ಕೆ ಸ್ವಿಟ್ಜರ್‌ಲೆಂಡ್‌ನಲ್ಲಿ ಸಾಕಷ್ಟು ಟೀಕೆಗಳೂ ವ್ಯಕ್ತವಾಗುತ್ತಿವೆ. ಜಗತ್ತಿನಾದ್ಯಂತ ಚರ್ಚೆಗೆ ಗ್ರಾಸವಾಗಿರುವ ಈ ಯಂತ್ರವನ್ನು ಹಿಟ್ಲರ್ ಕಾಲದಲ್ಲಿ ಬಳಸುತ್ತಿದ್ದ ಗ್ಯಾಸ್ ಚೇಂಬರ್‌ಗೆ ಹೋಲಿಸಿದ್ದಾರೆ. 'ಇಂತಹ ಯಂತ್ರಗಳು ಸಾವನ್ನು ವೈಭವೀಕರಿಸಿ, ಜನರನ್ನು ಆತ್ಮಹತ್ಯೆಗೆ ಪ್ರೋತ್ಸಾಹಿಸುತ್ತವೆ' ಎಂಬುದು ಹಲವರ ಟೀಕೆಯ ಹೂರಣ. ಬದುಕಲು ಸಾಧ್ಯವಾಗದೇ, ಗಂಭೀರ ಕಾಯಿಲೆಗಳಿಂದ ಬಳಲುತ್ತಿರುವವರಿಗೆ ಹಾಗೂ ನೋವಿಲ್ಲದೆ ಸಾಯಲು ಬಯಸುವವರಿಗೆ ಇದು ಸಹಕಾರಿ ಎಂಬುದು ಅಲ್ಲಿನ ವೈದ್ಯರ ಅಭಿಪ್ರಾಯ. 'ಸಾರ್ಕೊ' ಬಳಸಿ ದಯಾಮರಣ ಪಡೆಯುವ ಪ್ರಕ್ರಿಯೆಗೆ ದುಬಾರಿ ಹಣವನ್ನು ಪಾವತಿಸಬೇಕಿದೆ ಎನ್ನಲಾಗಿದೆ. ಸದ್ಯಕ್ಕೆ ಆ ಮೊತ್ತದ ವಿವರ ಬಹಿರಂಗಗೊಂಡಿಲ್ಲ.



### ಬಳಕೆ ಹೇಗೆ?

ನೋಡಲು ಪಾಡ್ ಟ್ಯಾಕ್ಸಿಯಂತೆ ಕಾಣುವ 'ಸಾರ್ಕೊ' ಯಂತ್ರವು 3ಡಿ ತಂತ್ರಜ್ಞಾನವನ್ನು ಹೊಂದಿದೆ. ವಿದ್ಯುತ್ ಚಾಲಿತವಾಗಿ ಕಾರ್ಯ ನಿರ್ವಹಿಸಲಿರುವ ಯಂತ್ರದ ಒಳಹೊಕ್ಕು ಮಲಗಿಕೊಂಡು ಬಾಗಿಲು ಮುಚ್ಚಿಕೊಂಡರೆ ಸಾಕು – ನಿಮಿಷದಲ್ಲೇ ಸಾವು. ಯಾವುದೇ ನೋವು, ಯಾತನೆ, ಹಿಂಸೆಯಿಲ್ಲದೆ ಸಾವು ಸಂಭವಿಸುತ್ತದೆ.

### ಹೇಗೆ ಸಾಯಿಸುತ್ತದೆ!

ಫಿಲಿಪ್ ಅವರು ನೀಡುವ ಮಾಹಿತಿ ಪ್ರಕಾರ, 'ಸಾರ್ಕೊ ಒಳಹೊಕ್ಕು ಅದರ ಬಾಗಿಲು ಮುಚ್ಚಬೇಕು. ಯಂತ್ರದ ಒಳಗಡೆ ಇರುವ ಬಟನ್ ಒತ್ತಿದರೆ ಪ್ರಜ್ಞೆ ತಪ್ಪಿಸುವಂತಹ ರಾಸಾಯನಿಕ ಆದರೊಳಗಡೆ ಹರಡುತ್ತದೆ. ಕ್ಷಣಾರ್ಧದಲ್ಲಿ ಪ್ರಜ್ಞೆ ತಪ್ಪುತ್ತದೆ. ಕ್ರಮೇಣ ದೇಹದಲ್ಲಿನ ಆಮ್ಲಜನಕ ಮತ್ತು ಇಂಗಾಲದ ಡೈ ಆಕ್ಸೈಡ್ ಪ್ರಮಾಣವನ್ನು ಕ್ಷೀಣಿಸುವಂತೆ ಮಾಡುತ್ತದೆ. ಹಾಗೆ ಮಾಡುವುದರಿಂದ ಉಸಿರುಗಟ್ಟಿದ ಅನುಭವವೂ ಆಗದು. ಬಳಿಕ 60 ಸೆಕೆಂಡ್‌ಗಳ ಒಳಗೆ ವ್ಯಕ್ತಿಯ ಉಸಿರನ್ನು ನಿಲ್ಲಿಸುತ್ತದೆ'.

ವ್ಯಕ್ತಿಯು ಸತ್ತ ನಂತರ ಯಂತ್ರದಿಂದ ಮೃತ ದೇಹವು ಹೊರಬರುತ್ತದೆ. ಅಲ್ಲದೇ ತಾನಾಗಿಯೇ ಯಂತ್ರವು ಶವಪೆಟ್ಟಿಗೆಯಿಂದ ಪ್ರತ್ಯೇಕಗೊಳ್ಳುತ್ತದೆ.

### ದಯಾಮರಣ ಎಂದರೇನು?

ಎಲ್ಲ ರೀತಿಯಿಂದ ಬೇಸತ್ತವರು, ವಾಸಿಯಾಗದ ಕಾಯಿಲೆಗಳಿಂದ ಬಳಲುತ್ತಿರುವವರು, ದಿಕ್ಕಿಲ್ಲದವರು, ಬದುಕಿನಲ್ಲಿ ಎಲ್ಲರನ್ನು, ಎಲ್ಲವನ್ನು ಕಳೆದುಕೊಂಡು ಹತಾಶೆಯಲ್ಲಿರುವವರು ಸಾಯಲು ಅನುಮತಿ ಕೋರುತ್ತಾರೆ. ಅವರ ಅರ್ಜಿಗಳನ್ನು ಪುರಸ್ಕರಿಸಿ ಸಾಯಲು ಅನುಮತಿ ಕಲ್ಪಿಸುವುದೇ ದಯಾಮರಣ. ಕೆಲ ದೇಶಗಳು ದಯಾಮರಣವನ್ನು ಕಾನೂನುಬದ್ಧಗೊಳಿಸಿದ್ದರೆ ಇನ್ನೂ ಕೆಲ ದೇಶಗಳು ಅದಕ್ಕೆ ನಿರಾಕರಿಸಿವೆ. ದಯಾಮರಣ ಕೋರಿ ರಾಷ್ಟ್ರಪತಿಗಳಿಗೆ ಅರ್ಜಿ ಸಲ್ಲಿಸಿರುವವರ ಸಂಖ್ಯೆ ಭಾರತದಲ್ಲಿ ಸಾಕಷ್ಟಿವೆ. ಆದರೆ ಅದಕ್ಕೆ ಅವಕಾಶ ಸಿಕ್ಕಿಲ್ಲ. ■